**All India Radio: Bangalore**
**National Bulletin In Kannada**
**04.02.2025 07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**04.02.2025 07.35 a.m.**
****************

ಮುಖ್ಯಾಂಶಗಳು

೧. ಉಭಯ ಸದನಗಳಲ್ಲಿಂದು ರಾಷ್ಟ್ರಪತಿ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಂದುವರಿಕೆ

೨. ಮುಂದಿನ ಎರಡರಿಂದ ಮೂರು ವರ್ಷಗಳಲ್ಲಿ ೧೦೦ ಅಮೃತ ಭಾರತ್ ರೈಲು ತಯಾರಿಕೆ

೩. ನವದೆಹಲಿಯಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಜಮ್ಮು-ಕಾಶ್ಮೀರ ಭದ್ರತಾ ಪರಿಶೀಲನೆ

೪. ವಸಂತ ಪಂಚಮಿ ದಿನವಾದ ನಿನ್ನೆ ತ್ರಿವೇಣಿ ಸಂಗಮದಲ್ಲಿ ೨.೩೩ ಕೋಟಿಗೂ ಹೆಚ್ಚು ಭಕ್ತಾದಿಗಳಿಂದ ಅಮೃತ ಸ್ನಾನ

೫. ಡಬ್ಲುಟಿಟಿ ಸಿಂಗಾಪುರ್ ಸ್ಮ್ಯಾಶ್ ಟೇಬಲ್ ಟೆನಿಸ್; ಮಿಶ್ರ ಡಬಲ್ಸ್ ಪ್ರೀ-ಕ್ವಾರ್ಟರ್ ಫೈನಲ್‌ನಲ್ಲಿಂದು ಭಾರತದ ಮಾನುಷ್ ಶಾ ಮತ್ತು ದಿಯಾ ಚಿತಳೆ ಜೋಡಿ ಸೆಣಸು

****************

ಲೋಕಸಭೆಯಲ್ಲಿ ನಿನ್ನೆ ಸಂಸತ್ತಿನ ಜಂಟಿ ಸದನಗಳನ್ನು ಉದ್ದೇಶಿಸಿ ರಾಷ್ಟ್ರಪತಿ ಮಾಡಿದ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆಯನ್ನು ಕೈಗೆತ್ತಿಕೊಳ್ಳಲಾಗಿದೆ.

ಚರ್ಚೆಯ ಸಂದರ್ಭದಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ಮತ್ತು ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ರಾಷ್ಟ್ರಪತಿಗಳ ಭಾಷಣದಲ್ಲಿ ಹೊಸ ವಿಚಾರಗಳಿಲ್ಲ. ದೇಶದ ಭವಿಷ್ಯವು ಯುವಕರ

ಮೇಲೆ ಅವಲಂಬಿತವಾಗಿದೆ. ಆದರೆ, ದೇಶದ ಯುವಕರನ್ನು ನಿರುದ್ಯೋಗ ಸಮಸ್ಯೆ ಕಾಡುತ್ತಿದೆ ಸರ್ಕಾರವು ಅದನ್ನು ಪರಿಹರಿಸಲು ವಿಫಲವಾಗಿದೆ ಎಂದು ಹೇಳಿದರು.

ಜಿಡಿಪಿಯಲ್ಲಿ ಉತ್ಪಾದನೆಯ ಪಾಲು ಶೇಕಡಾ ೧೫.೩ ರಿಂದ ಶೇಕಡಾ ೧೨.೬ ಕ್ಕೆ ಇಳಿದಿದೆ, ಇದು ಕಳೆದ ೬೦ ವರ್ಷಗಳಲ್ಲಿ ಅತ್ಯಂತ ಕಡಿಮೆ ಎಂದ ಅವರು ಸರ್ಕಾರದ ಪ್ರಮುಖ 'ಮೇಕ್ ಇನ್ ಇಂಡಿಯಾ' ಉಪಕ್ರಮ ಉತ್ತಮ ಪರಿಕಲ್ಪನೆಯನ್ನು ಹೊಂದಿತ್ತು ಆದರೆ ಅನುಷ್ಠಾನದಲ್ಲಿ ವಿಫಲವಾಗಿದೆ ಎಂದು ಹೇಳಿದರು.

ಇದಕ್ಕೂ ಮೊದಲು, ಪ್ರಸ್ತಾವನೆ ಮಂಡಿಸಿದ ಬಿಜೆಪಿ ಸಂಸದ ರಾಮ್‌ವೀರ್ ಸಿಂಗ್ ಬಿಧುರಿ, ಸಾರ್ವಜನಿಕ ಕಲ್ಯಾಣ ಯೋಜನೆಗಳು ಸೇರಿದಂತೆ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಸಾಧನೆಗಳನ್ನು ಪಟ್ಟಿ ಮಾಡಿದರು.

ಮಹಾ ಕುಂಭಮೇಳದ ಬಗ್ಗೆ ಪ್ರಸ್ತಾಪಿಸಿದಾಗಲೆಲ್ಲಾ ಕಾಂಗ್ರೆಸ್ ಅನಾನುಕೂಲತೆಯನ್ನು ಅನುಭವಿಸುತ್ತದೆ ಎಂದು ಬಿಜೆಪಿ ಸಂಸದ ರವಿಶಂಕರ್ ಪ್ರಸಾದ್ ಆರೋಪಿಸಿದರು, ಇಲ್ಲಿಯವರೆಗೆ ಮೂವತ್ತೈದು ಕೋಟಿ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾರೆ ಎಂದು ಮಾಹಿತಿ ನೀಡಿದರು.

ಚರ್ಚೆಯ ಸಮಯದಲ್ಲಿ ಇತರ ಸಂಸದರು ವಿವಿಧ ವಿಷಯಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು. ರಾಷ್ಟ್ರಪತಿಗಳ ಭಾಷಣದಲ್ಲಿ ಕನಿಷ್ಠ ಬೆಂಬಲ ಬೆಲೆ, ಎಂಎಸ್‌ಪಿ ಖಾತರಿಯ ಉಲ್ಲೇಖವಿಲ್ಲದಿರುವುದನ್ನು ಸಮಾಜವಾದಿ ಪಕ್ಷದ ನರೇಶ್ ಚಂದ್ರ ಉತ್ತಮ್ ಪಟೇಲ್ ಸದನಕ್ಕೆ ತಿಳಿಸಿದರು.

ಟಿಎಂಸಿಯ ಡಾ. ಕಾಕೋಲಿ ಘೋಷ್ ದಸ್ತಿದಾರ್ ಆಹಾರ ಹಣದುಬ್ಬರ ಮತ್ತು ಕೃಷಿ ಸಾಲ ಮನ್ನಾಗಳನ್ನು ಕೈಬಿಟ್ಟಿರುವುದನ್ನು ಟೀಕಿಸಿದರು. ಶಿವಸೇನೆ ಯುಬಿಟಿಯ ಅರವಿಂದ ಗಣಪತ್ ಸಾವಂತ್, ರೈತರಿಗೆ ಪ್ರಯೋಜನಕಾರಿ ಯೋಜನೆಗಳ ಬಗ್ಗೆ ಮಾತನಾಡಿದರು ಆದರೆ ಶಿಕ್ಷಣ ವ್ಯವಸ್ಥೆಯಲ್ಲಿನ ಅಸಮಾನತೆಗಳ ಬಗ್ಗೆ ಕಳವಳ ವ್ಯಕ್ತಪಡಿಸಿದರು.

ಚರ್ಚೆಯಲ್ಲಿ ಡಿಎಂಕೆಯ ಕೆ. ಕನಿಮೋಳಿ, ಜೆಡಿಯು ನ ದಿಲೇಶ್ವರ್ ಕಮೈತ್, ಆರ್‌ಎಲ್‌ಡಿಯ ರಾಜ್‌ಕುಮಾರ್ ಸಂಗ್ವಾನ್, ಬಿಜೆಪಿಯ ಗಣೇಶ್ ಸಿಂಗ್, ಪ್ರತಾಪ್ ಚಂದ್ರ ಸಾರಂಗಿ, ಸೇರಿದಂತೆ ಮತ್ತಿತರ ಸಂಸದರು ಭಾಗವಹಿಸಿದ್ದರು. ಇಂದು ಬೆಳಿಗ್ಗೆ ೧೧ ಗಂಟೆಗೆ ಸದನ ಮತ್ತೆ ಸಭೆ ಸೇರಲಿದ್ದು, ವಂದನಾ ನಿರ್ಣಯದ ಚರ್ಚೆ ಮುಂದುವರೆಯಲಿದೆ.

***************

ಮುಂದಿನ ಎರಡು ರಿಂದ ಮೂರು ವರ್ಷಗಳಲ್ಲಿ ೧೦೦ ಅಮೃತ ಭಾರತ ರೈಲುಗಳು, ೫೦ ನಮೋ ಭಾರತ್ ರೈಲುಗಳು ಮತ್ತು ೨೦೦ ವಂದೇ ಭಾರತ್ ರೈಲುಗಳು ಹಾಗೂ ಸ್ಲೀಪರ್‌ಗಳು ಮತ್ತು ಚೇರ್ ಕಾರ್‌ಗಳನ್ನು ತಯಾರಿಸಲಾಗುವುದು ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ.

ನವದೆಹಲಿಯಲ್ಲಿ ನಿನ್ನೆ ಮಾಧ್ಯಮಗಳಿಗೆ ಮಾಹಿತಿ ನೀಡಿದ ಅವರು, ೨೦೨೫-೨೬ರ ಕೇಂದ್ರ ಬಜೆಟ್ ಭಾರತೀಯ ರೈಲ್ವೆಗೆ ದಾಖಲೆಯ ೨.೫೨ ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ. ಬಜೆಟ್‌ನಲ್ಲಿ ರೈಲ್ವೆ ಸುರಕ್ಷತೆಗಾಗಿ ೧.೧೬ ಲಕ್ಷ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ ಎಂದು ಹೇಳಿದರು.

ಧ್ವನಿ : ಕೇಂದ್ರ ಸಚಿವ ಅಶ್ವಿನಿ ವೈಷ್ಣವ್

***************

ನವದೆಹಲಿಯಲ್ಲಿಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ.

ಸಭೆಯಲ್ಲಿ ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ, ಗೃಹ ಕಾರ್ಯದರ್ಶಿ ಗೋವಿಂದ ಮೋಹನ್, ಗುಪ್ತಚರ ದಳಗಳ ಮುಖ್ಯಸ್ಥರು ಮತ್ತಿತರ ಹಿರಿಯ ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆ ಇದೆ.

***************

ನಾಳೆ ನಡೆಯಲಿರುವ ದೆಹಲಿಯ ವಿಧಾನಸಭಾ ಚುನಾವಣೆಗೆ ರಾಷ್ಟ್ರ ರಾಜಧಾನಿ ಸಕಲ ಸಿದ್ಧತೆ ಕೈಗೊಂಡಿದೆ. ೭೦ ಸದಸ್ಯ ಬಲದ ದೆಹಲಿ ವಿಧಾನಸಭೆಗೆ ನಾಳೆ ಮತದಾನ ನಡೆಯಲಿದ್ದು, ಬೆಳಗ್ಗೆ ೭ ಗಂಟೆಯಿಂದ ಸಂಜೆ ೬ ಗಂಟೆವರೆಗೆ ಮತದಾರರು ತಮ್ಮ ಹಕ್ಕು ಚಲಾಯಿಸಲು ಅವಕಾಶ ಕಲ್ಪಿಸಲಾಗಿದೆ.

ಒಂದು ಕೋಟಿ ೫೬ ಲಕ್ಷಕ್ಕೂ ಹೆಚ್ಚು ಮತದಾರರು ಕಣದಲ್ಲಿರುವ ೬೯೯ ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧರಿಸಲಿದ್ದಾರೆ. ಈ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ನಿನ್ನೆ ಸಂಜೆ ತೆರೆ ಬಿದ್ದಿದೆ.

ಸುಗಮ ಚುನಾವಣೆಗಾಗಿ ಚುನಾವಣಾ ಆಯೋಗ ೧.೮ ಲಕ್ಷಕ್ಕೂ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿದೆ. ಇಲ್ಲಿಯವರೆಗೆ ಸುಮಾರು ೨೨೦ ಕೋಟಿಗೂ ಅಧಿಕ ಮೌಲ್ಯದ ನಗದು, ಮದ್ಯ, ಮಾದಕ ದ್ರವ್ಯ, ವಿತರಿಸಲಾಗುತ್ತಿದ್ದ ಉಚಿತ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣೆಯಲ್ಲಿ ಕಾರ್ಯನಿರತ ಸಿಬ್ಬಂದಿಗೆ ಅನುಕೂಲವಾಗುವ ನಿಟ್ಟಿನಲ್ಲಿ ದೆಹಲಿ ಮೆಟ್ರೊ ತನ್ನ ಕಾರ್ಯಾಚರಣೆಯನ್ನು ಬೆಳಗ್ಗೆ ೪ ಗಂಟೆಗೆ ಆರಂಭಿಸಲಿದೆ. ಬೆಳಗ್ಗೆ ೬ ಗಂಟೆಯ ವೇಳೆಗೆ ಪ್ರತಿ ೩೦ ನಿಮಿಷಗಳಿಗೊಮ್ಮೆ ರೈಲು ಚಲಿಸಲಿದ್ದು, ಬಳಿಕ ಎಂದಿನ ವೇಳಾಪಟ್ಟಿಯನ್ನು ಅನುಸರಿಸಲಾಗುವುದು.

****************

ಭಾರತ ಮತ್ತು ರಷ್ಯಾ ನಡುವಿನ ದೃಢವಾದ ಸಂಬಂಧ ಸಹಕಾರ ಮತ್ತು ರಾಜತಾಂತ್ರಿಕತೆಯ ಉಜ್ವಲ ಉದಾಹರಣೆಯಾಗಿದ್ದು, ಜಾಗತಿಕವಾಗಿ ಅನುಕರಣೀಯವಾಗಿದೆ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ.

ಸಂಸತ್ ಭವನಕ್ಕೆ ರಷ್ಯಾದ ಸಂಸದೀಯ ನಿಯೋಗದ ಭೇಟಿಯ ಸಂದರ್ಭದಲ್ಲಿ ಮಾತನಾಡಿದ ಅವರು, ಉಭಯ ರಾಷ್ಟ್ರಗಳ ನಡುವಿನ ಐತಿಹಾಸಿಕ ಮತ್ತು ಆಳವಾಗಿ ಬೇರೂರಿರುವ ದ್ವಿಪಕ್ಷೀಯ ಸಂಬಂಧದ ಕುರಿತು ವಿವರಿಸಿದರು.  ಭಾರತ-ರಷ್ಯಾ ದ್ವಿಪಕ್ಷೀಯ ಸಂಬಂಧಗಳನ್ನು ಜಾಗತಿಕ ವೇದಿಕೆಯಲ್ಲಿ ವಿಶೇಷ ರೀತಿಯಲ್ಲಿ ನೋಡಲಾಗುತ್ತದೆ ಎಂದು ಹೇಳಿದರು.

ಎರಡು ರಾಷ್ಟ್ರಗಳ ನಡುವಿನ ಸಂಬಂಧ ದೀರ್ಘಕಾಲದ್ದಾಗಿದ್ದು, ಸ್ವಾತಂತ್ರ್ಯದ ನಂತರ ರಷ್ಯಾ, ಭಾರತದ ಅತ್ಯಂತ ಹತ್ತಿರದ ಮಿತ್ರ ರಾಷ್ಟ್ರವಾಗಿದೆ ಎಂದು ಸ್ಪೀಕರ್ ತಿಳಿಸಿದರು. ೨೦೨೪ ರಲ್ಲಿ ಬ್ರಿಕ್ಸ್‌ನ ಅತ್ಯಂತ ಫಲಪ್ರದ ಅಧ್ಯಕ್ಷತೆಗಾಗಿ ರಷ್ಯಾವನ್ನು ಅಭಿನಂದಿಸಿದ ಮತ್ತು ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ಸಂಸದೀಯ ಶೃಂಗಸಭೆ ಸ್ಮರಿಸಿದ ಅವರು, ಸಂಸದೀಯ ಪ್ರಕ್ರಿಯೆಗಳನ್ನು ಬಲಪಡಿಸುವಲ್ಲಿ ಮತ್ತು ಸಂಬಂಧಗಳನ್ನು ಗಾಢವಾಗಿಸುವಲ್ಲಿ ಅಂತಹ ವಿನಿಮಯಗಳ ಮಹತ್ವವನ್ನು ಓಂ ಬಿರ್ಲಾ ಒತ್ತಿ ಹೇಳಿದರು.

ಧ್ವನಿ : ಓಂ ಬಿರ್ಲಾ

****************

ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ವಸಂತ ಪಂಚಮಿ ದಿನವಾದ ನಿನ್ನೆ ೨.೩೩ ಕೋಟಿಗೂ ಹೆಚ್ಚು ಭಕ್ತಾದಿಗಳು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಕೈಗೊಂಡರು. ಅಮೃತ ಸ್ನಾನವು ಮಹಾಕುಂಭಮೇಳದ ಅತ್ಯಂತ ಮಹತ್ವದ ಮತ್ತು ಪವಿತ್ರ ಆಚರಣೆಯಾಗಿದೆ. ಮೊದಲ ಎರಡು ಅಮೃತ ಸ್ನಾನಗಳು ಮಕರ ಸಂಕ್ರಾಂತಿ ಮತ್ತು ಮೌನಿ ಅಮಾವಾಸ್ಯೆಯಂದು ನಡೆದವು.

ರಾಜ್ಯ ಸರ್ಕಾರ ಹೆಚ್ಚಿನ ಭದ್ರತೆ ಮತ್ತು ಸಮರ್ಪಕ ವ್ಯವಸ್ಥೆಗಳನ್ನು ಅಳವಡಿಸಿಕೊಂಡ ಪರಿಣಾಮ ಮಹಾಕುಂಭದಲ್ಲಿ ಮೂರನೇ ಅಮೃತ ಸ್ನಾನ ಸುಗಮವಾಗಿ ಮುಕ್ತಾಯಗೊಂಡಿತು.

ಮೇಳ ಪ್ರದೇಶದ ಭದ್ರತೆಯನ್ನು ಡ್ರೋನ್‌ಗಳು, ಹೆಲಿಕಾಪ್ಟರ್‌ಗಳು ಮತ್ತು ಸಿಸಿಟಿವಿ ಕ್ಯಾಮೆರಾಗಳ ಮೂಲಕ ಮೇಲ್ವಿಚಾರಣೆ ಮಾಡಲಾಯಿತು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಮ್ಮ ನಿವಾಸದಲ್ಲಿ ಸ್ಥಾಪಿಸಲಾದ ನಿಯಂತ್ರಣಾ ಕೊಠಡಿಯಲ್ಲಿ ಭದ್ರತಾ ಪರಿಸ್ಥಿತಿಯ ಮೇಲ್ವಿಚಾರಣೆ ಮಾಡಿದರು. ಮುಖ್ಯಮಂತ್ರಿಗಳು ಡಿಜಿಪಿ ಮತ್ತು ಗೃಹ ಕಾರ್ಯದರ್ಶಿಗಳಿಂದ ನಿರಂತರ ಮಾಹಿತಿ ಪಡೆದು ಅಮೃತ ಸ್ನಾನವನ್ನು ಸುಗಮವಾಗಿ ನಡೆಸಲು ಸೂಚನೆಗಳನ್ನು ನೀಡಿದರು. ವಿಶ್ವದ ಅತಿದೊಡ್ಡ ಆಧ್ಯಾತ್ಮಿಕ ಸಭೆ ಎಂದು ಗುರುತಿಸಲ್ಪಟ್ಟ ಮಹಾ ಕುಂಭಮೇಳ ಜನವರಿ ೧೩ ರಂದು ಪ್ರಾರಂಭವಾಗಿದ್ದು, ಇಲ್ಲಿಯವರೆಗೆ ೩೭ ಕೋಟಿಗೂ ಹೆಚ್ಚು ಭಕ್ತರು ಪವಿತ್ರ ಸ್ನಾನ ಮಾಡಿದ್ದಾರೆ.

***************

ಪ್ರಯಾಗ್‌ರಾಜ್ ಕುಂಭ ಮೇಳಕ್ಕಿಂದು ಭೂತಾನ್ ದೊರೆ ಜಿಗ್ಮೆ ಕೇಸರ್ ನಾಮ್‌ಗೇಲ್ ವಾಂಗ್ ಚುಕ್ ಭೇಟಿ ನೀಡಲಿದ್ದಾರೆ.

ಈ ವೇಳೆ ಅವರು ತ್ರಿವೇಣಿ ಸಂಗಮದಲ್ಲಿ ಅಮೃತ ಸ್ನಾನ ಕೈಗೊಳ್ಳಲಿದ್ದಾರೆ. ನಿನ್ನೆ ಅವರು, ಉತ್ತರ ಪ್ರದೇಶದ ಲಖನೌಗೆ ಆಗಮಿಸಿದರು.

***************

ದಕ್ಷಿಣ ಕಾಶ್ಮೀರದ ಕುಲ್ಗಾಮ್ ಜಿಲ್ಲೆಯಲ್ಲಿ ನಿನ್ನೆ ನಡೆದ ಭಯೋತ್ಪಾದನಾ ದಾಳಿಯಲ್ಲಿ ಮಾಜಿ ಯೋಧರೊಬ್ಬರು ಹುತಾತ್ಮರಾಗಿದ್ದಾರೆ.

ಸೇನಾ ಮೂಲಗಳ ಪ್ರಕಾರ ಬೆಹಿಬಾಗ್ ಪ್ರದೇಶದಲ್ಲಿ ಮಾಜಿ ಯೋಧ ಅವರ ಪತ್ನಿ ಹಾಗೂ ಅವರ ಮಗಳ ಮೇಲೆ ಭಯೋತ್ಪಾದಕರು ದಾಳಿ ನಡೆಸಿದರು. ದಾಳಿಯ ಬಳಿಕ ಮೂವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆ ಫಲಕಾರಿಯಾಗದೆ ಮಾಜಿ ಯೋಧರು ಸಾವನ್ನಪ್ಪಿದರು. ಅವರ ಪತ್ನಿ ಹಾಗೂ ಮಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

***************

ಕಳೆದ ತಿಂಗಳು ೩೧ ರ ವೇಳೆಗೆ ಚಲಾವಣೆಯಲ್ಲಿರುವ ೨ ಸಾವಿರ ರೂಪಾಯಿ ನೋಟುಗಳ ಒಟ್ಟು ಮೌಲ್ಯ ೬ ಸಾವಿರದ ೫೭೭ ಕೋಟಿ ರೂಪಾಯಿಗಳಿಗೆ ಇಳಿದಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಮೇ ೨೦೨೩ರಲ್ಲಿ ಚಲಾವಣೆಯಲ್ಲಿದ್ದ ೩.೫೬ ಲಕ್ಷ ಕೋಟಿ ಮೌಲ್ಯದ ಕರೆನ್ಸಿ ನೋಟುಗಳಲ್ಲಿ ಶೇಕಡ ೯೮.೧೫ ರಷ್ಟು ಹಿಂತೆಗೆದುಕೊಳ್ಳಲಾಗಿದೆ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

೨೦೨೩ ರ ಮೇ ೧೯ ರಂದು ೨೦೦೦ ರೂಪಾಯಿ ನೋಟುಗಳನ್ನು ಹಿಂತೆಗೆದುಕೊಳ್ಳುವುದಾಗಿ ಆರ್‌ಬಿಐ ಘೋಷಿಸಿತ್ತು, ನಾಗರಿಕರು ಅಕ್ಟೋಬರ್ ೭, ೨೦೨೩ ರೊಳಗೆ ಅವುಗಳನ್ನು ಬ್ಯಾಂಕುಗಳಲ್ಲಿ ಠೇವಣಿ ಇಡಬೇಕು ಅಥವಾ ವಿನಿಮಯ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿತ್ತು.

****************

ಸಿಂಗಾಪುರದಲ್ಲಿ ನಡೆಯಲಿರುವ ಡಬ್ಲುಟಿಟಿ ಸಿಂಗಾಪುರ್ ಸ್ಮ್ಯಾಶ್ ಟೇಬಲ್ ಟೆನಿಸ್‌ನ ಮಿಶ್ರ ಡಬಲ್ಸ್ ಪ್ರಿ-ಕ್ವಾರ್ಟರ್ ಫೈನಲ್‌ನಲ್ಲಿ ಇಂದು ಭಾರತದ ಮಾನುಷ್ ಶಾ ಮತ್ತು ದಿಯಾ ಚಿತ್ರಳೆ ಜೋಡಿ, ಮೆಕ್ಸಿಕೊದ ಮಾರ್ಕೋಸ್ ಮ್ಯಾಡ್ರಿಡ್ ಮತ್ತು ಅರಾಂಟ್ಕ್ಸಾ ಕೊಸಿಯೊ ಜೋಡಿಯನ್ನು ಎದುರಿಸಲಿದೆ. ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ ೩:೩೦ ಕ್ಕೆ ಪ್ರಾರಂಭವಾಗಲಿದೆ.

****************